ಇಸ್ತಿಹಾರ್.

ತಾರೀಖು 14ನೇ ಮೇ 1903.

1902—1903ನೇ ಸಾಲಾಖೈರು ವರಿಗೆ ಮೆ|| ಕೆ. ಶ್ಯಾಮೈಯ್ಯಂಗಾರ್ರಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿಗಾಗಿ

ಸೂಳೆಕೆರೆ ದೊಡ್ಡಗಟ್ಟೆ ಕಬ್ಬಳ	ತ್ಯಾವಣಿಗೆ ರಾಮಗೊಂಡನಹಳ್ಳಿ	ಚನ್ನಗಿರಿ ತಾಲ್ಲೂಕು ಈ ಇರೇಬಿನಲ್ಲಿ ಕಾಣುವ ಗ್ರಾಮಗಳಲ್ಲಿ ಜಮೀನುಗಳು 1903ನೇ ಜೂ೯ ತಿಂಗಳು 18, 20, 22, 23, 24 ತಾರೀಖುಗಳಲ್ಲಿ ಕ್ರಮವಾಗಿ ಹರಾಜು ಹಾಕಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪ್ಸೀಲುಗಳ ಬಗ್ಗೆ 1903ನೇ ಇಸವಿ ಮೇ ತಾರೀಖು 21ನೇ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷಾಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮಾ.

ತಾರೀಖು 25ನೇ ಮೇ 1903, ಮೊಕ್ಕಾಂ ಚಿಕ್ಕಮಗಳೂರು.

ಮೈಸೂರು ಸರ್ಕಾರದವರ ನಂಬರು 9007—ಲೆಜಿಸ್-56 ತಾರೀಖು 11ನೇ ಡಿಸಂಬರು 1901ರ ಇಸ್ತಿಹಾರಿನ ಪ್ಯಾರಾ 5ಕ್ಕೆ ಅನುಗುಣವಾಗಿ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ನುತ್ತು ಭದ್ರಾನದಿಗಳಲ್ಲಿ ಬರುವ ನವಂಬರು ಮಾಹೆ ಆಖೈರು ವರಿಗೂ ಯಾರೂ ಮೀನು ಹಿಡಿಯಕೂಡದೆಂಬದಾಗಿ ಇದರಿಂದ ವಿಧಿಸಿರುತ್ತ ತಿಳಿಯುವದು.

ಎಂ. ನಾರಾಯಣರಾವ್, ಡೆಪ್ಯೂಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 20ನೇ ಮೇ 1903ನೇ ಇಸವಿ ಚಿತ್ರದುರ್ಗ.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ವಿವರಿಸಿ ಇರುವ ರಿಜಿಸ್ಟ್ರಾದ ದಸ್ತೈವಜುಗಳು 2 ವರುಷಗಳಿಗೆ ಮೇಲ್ಪಟ್ಟು ಮೂರ್ಜನ್ನಲ್ಲಿ ಬರಬಿರುವ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ವಾರಸದಾರ್ರು ಹಾಜರಾಗಿ ವಾಪಸು ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳುವಳಗಾಗಿ ಸದರಿ ದಸ್ತೈವಜು ಹಾಜರ್ಮಾಡಿದವರಾಗಲಿ ಅಥವಾ ಆವರ ಪ್ರತಿನಿಧಿಗಳಾಗಲಿ ಯಾ ದಸ್ತೈವಜುಗಳಿಗೆ ಬಾಧ್ಯತೆ ವುಳ್ಳವರಾಗಲಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ತಮ್ಮ ದಸ್ತೈವಜು ವಾಪಸು ಪಡಿಯಬೇಕಾ ತಪ್ಪಿದರೆ ರಿಜಸ್ಟ್ರೇಷನ್ ಆಕ್ಟು 85ನೇ ಸೆಕ್ಷನ ವೇಂಗೆ ನಾಶಪಡಿಸಲ್ಪಡುತ್ತೆ.

ಬುಕ್ಕು ಮತ್ತು ರಿಜಿಸ್ಟ್ರರ್ ನಂಬರು.	ದಸ್ತೈವಜು ಬರದು ಕೊಟ್ಟವರ ಹೆಸರು.	ಬರಕಿಕೊಂಡವನ ಹೆಸರು.	ದಸ್ತೈವಜು ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತೈವಜು ಸ್ವಭಾವ ಕಿಮ್ಮತ್ತು.
ಬುಕ್ಕು ನಂ. 1 ದಸ್ತೈವಜು ನಂ. 84	ನಾರಾಯಣನಾಯಿಕ.	ನಾರಣಂಮ ... ಪಾಪಣ ... ನಾರಾಯಣಸಾಮಿ ..	6—8—1900	7— 8—1900	200 ರೂಪಾಯಿನ ದಾನ ಪತ್ರ
ಡಿಟೋ 86	ಡಿಟೋ ...	ಮಂಗವ್ವ ..	6— 8—1900	7— 8—1900	80 ರೂಪಾಯಿನ ಖುಲಾಸೆ ಪತ್ರ
ಡಿಟೋ 223	ರಾಘವೇಂದ್ರರಾವು...	ಅನಂತಶೆಟ್ಟು ...	1—11—1900	5—11—1900	200 ರೂಪಾಯಿನ ಕ್ರಯಪತ್ರ

ಬಿ. ವೆಂಕೋಬರಾವ್,
ಫೋರ್ ರಿಜಿಸ್ಟ್ರರ್.

ತಾರೀಖು 29ನೇ ಮೇ 1903.

ಇದರಿಂದ ಸರ್ವಸ್ಸಾ ಜನರಿಗೂ ತಿಳಿಯಪಡಿಸುವದೇನಂದರೆ :—ನಮ್ಮ ತಂದೆಯಾದ ತುಮಕೂರು ವಾಸಸ್ಥ ಜವಳಿ ಅಂಗಡಿ ಚನ್ನಪ್ಪನವರ ಮಗ ಕಂಬದೂರಯ್ಯನಿಗೆ ಪಿತೃಭೃಸುತೆಯಿಂದ, ಜ್ಞಾನ ಸ್ವಾಧೀನವಿಲ್ಲದೆ ಮನಸ್ಸೀ ಇರುತ್ತಾನೆ. ಈತನಿಂದ ಯಾರಾದರೂ, ಯಾವ ಮೂಲಕವಾದ ಲೇವಾದೇವಿಯನ್ನಾಗಲೀ, ಸೊತ್ತುಗಳು ಪರಭಾರೆಯನ್ನಾಗಲಿ ಇತರ ಯಾವವಿಧವಾದ ಟ್ರಾನ್ಸ್ಯಕ್ಷನ್ ಆಗಲೀ ನಡಿಸಿದಲ್ಲಿ ನಮ್ಮ ಆಸ್ತಿಯು ಅಂಥಾ ಟ್ರಾನ್ಸ್ಯಕ್ಷನ್‌ಗೆ ಈಡಾಗಲಾರದು.

ರುಜು—ತುಮಕೂರಲ್ಲಿರುವ ಜವಳಿ ಅಂಗಡಿ ಕಂಬದೂರೈಯ್ಯನ ಮಗ
ಚನ್ನಪ್ಪನ ರುಜವು.

Mysore Government Central Press, Bangalore—1903.